ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ಕನಸು ಕಾಣದ ವ್ಯಕ್ತಿ, ರೆಕ್ಕೆ ಇಲ್ಲದ ಪಕ್ಷಿ ಎರಡೂ ಒಂದೇ ಅಂತೆ. ಹೌದಾ?



ಕನಸು ಕಾಣದವ ಹೆಸರು ಮಾಡಲಾರ. ರೆಕ್ಕೆ ಇಲ್ಲದ ಕಿವೀ ನ್ಯೂಝಿಲೆಂಡಿನ ರಾಷ್ಟ್ರಪಕ್ಷಿ.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ

ಟಿ.ವಿಯಲ್ಲಿ ಒಳ್ಳೆಯ ಕಾರ್ಯಕ್ರಮದ ಮಧ್ಯೆ ಜಾಹೀರಾತು ನುಸುಳಿದಾಗ ನಿಮಗೆ ಏನೆನ್ನಿಸುತ್ತದೆ ರಾಮ್?

ಬಾದಾಮಿ ಹಲ್ವದಲ್ಲಿ ಹಾಗಲಕಾಯಿಯ ತುಂಡು ಸಿಕ್ಕಂತೆ.

ಎಸ್.ಸಿ. ರಮೇಶ್, ಮೈಸೂರು

ಪ್ರಶಸ್ತಿಗಳನ್ನು ನೀಡಲು ಮಾನದಂಡ ವ್ಯಕ್ತಿಯ ಸಾಧನೆಯೋ, ಆತ ಪ್ರಶಸ್ತಿಗಾಗಿ ನೀಡುವ ಅರ್ಜಿಯೋ?

ಗರುಡನಿಗೆ ಪಕ್ಷಿರಾಜ, ಸಿಂಹಕ್ಕೆ ವನರಾಜ ಬಿರುದುಗಳು ಬಂದದ್ದು ಅರ್ಜಿಯಿಂದಲ್ಲ.

ದೇವೇಂದ್ರ, ಕಡೂರು

ಮಿತ್ರರು ಜಾಸ್ತಿಯಾದ ಹಾಗೆ ಶತ್ರುಗಳು ಜಾಸ್ತಿಯಾಗ್ತಾರಾ ಸಾರ್?



ಹೊರಗಲ್ಲ, ಒಳಗೇ. ಸೀಸರ್‌ಗೆ ಮಾರಕವಾದುದು ಆಪ್ತ ಸ್ನೇಹಿತನೇ.

ಮಂಡಿ ಕುಮಾರ್, ಬೆಂಗಳೂರು

ಚೆನ್ನಾಗಿದ್ದೀರಾ ಮತ್ತು ಆರೋಗ್ಯವಾಗಿದ್ದೀರಾ ಇವೆರಡರ ವ್ಯತ್ಯಾಸವೇನು?

ಚೆನ್ನಾಗಿದ್ದೀರಾ? ಪದಕ್ಕೆ ಈಗ ಸೇರಿಸಿದರೆ ಆರ್ಥಿಕ ಸ್ಥಿತಿಗೂ, ವೈರ ಕಳೆದುದಕ್ಕೂ ಅನ್ವಯಿಸುತ್ತದೆ.

ಅನಸೂಯ ಟಿ. ಕೇದಿಗೆಮನೆ

ಗಂಡು ಮೆಟ್ಟಿದ ನೆಲ ಹುಬ್ಬಳ್ಳಿ. ಹೆಣ್ಣು ಮೆಟ್ಟಿದ ನೆಲ?

ಕೋಮಲೆನಾಡು.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ

ಎಲ್ಲರೂ ಹಾಯಾಗಿರಬೇಕೆಂದು ಬಯಸುತ್ತಾರಲ್ಲಾ...?

ಸುಳ್ಳು. ಹಾಗಿದ್ದಿದ್ದರೆ ನೆಮ್ಮದಿ ಕೆಡಿಸುವ ಜ್ಯೋತಿಷ್ಯ ಕಾರ್ಯಕ್ರಮ ಇರುತ್ತಿರಲಿಲ್ಲ.

ಫಾಲನೇತ್ರ ಸಜ್ಜನ, ಶಿರಸಿ

ದುಡಿಮೆಯೇ ದುಡ್ಡಿನ ತಾಯಿಯಾದರೆ ತಂದೆ?

ಅನಿವಾರ್ಯತೆ.

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು

ಮಲಗಿದ ತಕ್ಷಣ ಏಕೆ ನಿದ್ದೆ ಬರುವುದಿಲ್ಲ?

ಯಾರು ಹೇಳಿದ್ದು? ಕೂತ ತಕ್ಷಣವೇ ನಿದ್ದೆ ಬರುತ್ತದೆನ್ನುವುದಕ್ಕೆ ನೂರಾರು ಮಂತ್ರಿಗಳ ಸಾಕ್ಷ್ಯವಿದೆ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

ನೌಕರಿಗೆ ಅರ್ಜಿ ಸಲ್ಲಿಸುವಾಗ ಅರ್ಜಿಯಲ್ಲಿ ಮ್ಯಾರೀಡ್/ಅನ್‌ಮ್ಯಾರೀಡ್ ಎಂದೇಕೆ ಕೇಳಿರುತ್ತಾರೆ?

ಮದುವೆಯಾದವರು ಬೇಗ ಮನೆಗೆ ಹೋಗುವ ತರಾತುರಿ, ಉತ್ಸಾಹ ತೋರುವುದಿಲ್ಲವಂತೆ.

ಪಿ.ಎನ್. ಶ್ರೀವತ್ಸ, ಬೆಂಗಳೂರು

ವಾರಪತ್ರಿಕೆ, ಮಾಸಪತ್ರಿಕೆಗಳ ಪ್ರಶ್ನೋತ್ತರ ಮಾಲಿಕೆಯಲ್ಲಿ ಉತ್ತರಿಸುವವರೆಲ್ಲಾ ಗಂಡಸರೇ ಆಗಿರಲು ಕಾರಣ?

ಛೆ! ಜೀನ್ಸ್ ತೊಟ್ಟ ಮಾತ್ರಕ್ಕೆ ನನ್ನನ್ನು ಗಂಡಸೆಂದು ಕರೆಯುವುದು ಸರಿಯಲ್ಲ.

ಬಾ.ರಂ. ಸುರೇಶ್, ಶಿವಮೊಗ್ಗ

ಈಗಿನ ಹುಡುಗಿಯರ, ಆಂಟಿಯರ ಡ್ರೆಸ್‌ಗಳನ್ನು ನೋಡಿದರೆ ಎಂತಹವರಿಗೂ ಮೈ ಝುಂ ಅನಿಸುತ್ತದಲ್ಲಾ, ಏಕೆ?

ಆ ವಿಷಯ ಅಂತಿರಲಿ. ಈ ಪ್ರಶ್ನೆಯನ್ನು ಓದಿ ನಿಮ್ಮ ಆಂಟಿ, ನಿಮ್ಮ ಮಗಳು ಏನೆಂದುಕೊಳ್ಳುವರೋ ಏನೋ!

ಆರ್. ಮಧುಸೂದನ್, ಹಾಸನ

ಬೆಳಕನ್ನು ನಿರೀಕ್ಷಿಸಿ ಬರುವ ನ್ಯಾಯಾಲಯದ ಬಣ್ಣ ಕಪ್ಪು. ಏಕೆ?

ಬಿಳಿಯೇ ಇತ್ತಂತೆ. ಅಲ್ಲಿಗೆ ಬರುವವರ ನಿಟ್ಟುಸಿರಿನ ಬಿಸಿ ತಾಗೀ ತಾಗೀ ಕಪ್ಪಾಯಿತಂತೆ.

## ಬಹುಮಾನಿತ ಪ್ರಶ್ನೆ

ಶೃತಿ ರಿಗ್ರೆಟ್ ಐಯ್ಯರ್, ಬೆಂಗಳೂರು

ಆಗ ಕೆಮ್ಮುತ್ತಿದ್ದ ವೃದ್ಧರಿಗೆ ಮನೆಯವರೆಲ್ಲ ಆರೈಕೆ ಮಾಡುತ್ತಿದ್ದರು. ಈಗ ಸ್ವಲ್ಪ ಕೆಮ್ಮಿದರೂ ಮೂಲೆ ಸೇರಿಸುತ್ತಾರಲ್ಲಾ...?

ಸರಿಯೇ. ಆಗ ಕೆಮ್ಮು ಅನಾರೋಗ್ಯದ ಕಾಲಿಂಗ್ ಬೆಲ್. ಈಗ ಅದೇ ಕಾಲನ ವಾರ್ನಿಂಗ್ ಬೆಲ್.

ಡಾ. ಸೀಮಂತಿನಿ ದೇಸಾಯಿ, ಬೆಂಗಳೂರು

ಯಾರು ಯಾರಿಗೆ ಹೇಳಿದರು : ನಿನ್ನಲ್ಲಿಯ ನೀನು ನೀನಲ್ಲ; ನನ್ನಲ್ಲಿಯ ನಾನು ನಾನಲ್ಲ...?

ನಿಜ ವಿಷ್ಣುವಾದ ನರಸಿಂಹನಿಗೆ ನಿಜ ವಿಜಯನಾದ ಹಿರಣ್ಯಕಶಿಪು.

ರಾಮಸ್ವಾಮಿ ಭೀಮನಕಟ್ಟೆ, ಬೆಂಗಳೂರು

ಐಟಿ, ಈಡಿ, ಸಿಬಿಐ ರೈಡ್ ಆದವರ ಮನೆಗಳಿಗೆ ಸ್ವಾಮಿಗಳು ಭೇಟಿ ನೀಡುವುದರ ಉದ್ದೇಶ?

ಆಪ್ತವಾದುದನ್ನು ಕಳೆದುಕೊಂಡವರ ಮನೆಗೆ ಹಿರಿಯರು ಭೇಟಿ ನೀಡಿ ತಲೆ ಸವರುವುದು ಸಂಪ್ರದಾಯ.

ವಿ. ಹಮೀದ್, ವಿಟ್ಲ

ಹೆಂಡತಿ ದೇವಸ್ಥಾನಕ್ಕೆ ಹೋದರೂ ಪತಿ ಫೋನ್ ಮಾಡುತ್ತಾನೇಕೆ...?



ಚಪ್ಪಲಿ ಹುಷಾರೂ... ಎಂದು ಜ್ಞಾಪಿಸಲು.

ಸುಮನಾ, ತೆಲಂಗಾಣ

ತಾರಾಮಂಡಲದಿಂದ ನಕ್ಷತ್ರಗಳು ಕಾಣೆಯಾಗುತ್ತಿವೆ ಎಂಬ ಸುದ್ದಿ; ಎಲ್ಲಿಗೆ ಹೋಗಿರಬಹುದು ರಾಮ್?

ಡಲ್ ಆಗಿರುವುದನ್ನು ಫಳಫಳ ಹೊಳೆಸುವ ಯೂನಿವರ್ಸಲ್ ಪಾಲಿಷಿಂಗ್ ಸ್ಟೋರ್‌ಗೆ.

ಜೆ.ಜಿ.ಹಳ್ಳಿ ಚಿದಾನಂದ್, ಹಿರಿಯೂರು

ಹೆಣ್ಣಿನ ಮನಸ್ಸನ್ನು ಕಾಲುಗಳಿಲ್ಲದ ಮೀನಿನ ಹೆಜ್ಜೆಗೆ ಹೋಲಿಸುವುದೇಕೆ?

ಸರೋವರದಂತೆಯೇ ಮಾನಸ ಸರೋವರದಲ್ಲೂ ಹೆಜ್ಜೆಗುರುತು ಕಾಣದಿರುವುದರಿಂದ.

■ ರಾಮ್